ಅವರು ಕಾನೂನಿಗಿಂತ ದೊಡ್ಡವರೇ? | ಸದನದಲ್ಲಿ ಪಕ್ಷಾತೀತ ವಿಮರ್ಶೆ

# ನ್ಯಾಯಾಂಗ vs ಶಾಸಕಾಂಗ

20-3-21

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು


ಶಾಸನಸಭೆಯಲ್ಲಿ ಆಗಾಗ್ಗೆ ನ್ಯಾಯಾಂಗ ವ್ಯವಸ್ಥೆಯನ್ನು ವಿಮರ್ಶಿಸುವ ನಿದರ್ಶನಗಳು ಇತಿಹಾಸದ ಪುಟದಲ್ಲಿ ಕಾಣಸಿಗುತ್ತವೆ. ಶುಕ್ರವಾರ ವಿಧಾನಸಭೆಯಲ್ಲಿ ಈ ವಿದ್ಯಮಾನ ಪುನರಾವರ್ತನೆಯಾಯಿತು. ನ್ಯಾಯಾಂಗದ ಬಗ್ಗೆ ವಿಮರ್ಶೆ ಮಾಡಬಹುದಾದ ಏಕೈಕ ಸ್ಥಳ ಶಾಸನಸಭೆ ಎಂದು ಭಾವಿಸಿದ ಶಾಸಕರು ಗಟ್ಟಿ ಮನಸ್ಸಿನಲ್ಲಿ ನ್ಯಾಯಾಂಗ ವ್ಯವಸ್ಥೆಯ ಲೋಪ, ಮಡಿವಂತಿಕೆ, ಜನಪ್ರತಿನಿಧಿಗಳ ಕಡೆಗಣನೆ, ನಿಯಮಮೀರಿ ನಿವೇಶನ ಪಡೆದಿದ್ದು, ರೈಡ್‌ನಂತಹ ವಿಚಾರಗಳನ್ನು ಪ್ರಸ್ತಾಪಿಸಿ ಚರ್ಚಿಸಿದರು.

ಬಜೆಟ್ ಮೇಲಿನ ಚರ್ಚೆ ವೇಳೆ ಕಾಂಗ್ರೆಸ್‌ನ ಕೆ.ಆರ್. ರಮೇಶ್ ಕುಮಾರ್ ಮಾತನಾಡುವಾಗ ನ್ಯಾಯಾಂಗದ ವಿಷಯ ಮೊದಲು ಪ್ರಸ್ತಾಪವಾಯಿತು. ಬಳಿಕ ಜೆಡಿಎಸ್‌ನ ಎ.ಟಿ.ರಾಮಸ್ವಾಮಿ ಹರಿತ ಅಭಿಪ್ರಾಯಗಳಿಂದ ಸದನದ ಗಮನ ಸೆಳೆದರು. ಉಳಿದವರಿಗೂ ಅಭಿಪ್ರಾಯ ನೀಡಲು ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಪ್ರೇರೇಪಿಸಿದರು. ನ್ಯಾಯಾಧೀಶರ ಹುದ್ದೆ ಸಂವಿಧಾನಿಕ. ಅವರೇನು ಸರ್ಕಾರಿ ನೌಕರರಲ್ಲ. ಆದರೂ, ಸರ್ಕಾರಿ ನೌಕರರ ಗೃಹ ನಿರ್ಮಾಣ ಮಂಡಳಿಯ ಮೂಲಕ 84 ನ್ಯಾಯಾಧೀಶರು ನಿವೇಶನ ಪಡೆದುಕೊಂಡರು. ಈ ವಿಷಯ ಚರ್ಚೆಯಾಯಿತು, ಕ್ರಮಗಳಾಯಿತೇ? ಅವರು ಕಾನೂನಿಗಿಂತ ಅತೀತರೇ? ಕಾನೂನಿಗಿಂತ ದೊಡ್ಡವರೇ ಎಂದು ಎ.ಟಿ.ರಾಮಸ್ವಾಮಿ ನೇರವಾಗಿ ಪ್ರಶ್ನಿಸಿದರು. ನ್ಯಾಯಾಂಗ ಸೀತೆಯಷ್ಟೇ ಪಾವಿತ್ರ್ಯ ಕಾಪಾಡಿಕೊಳ್ಳಬೇಕೆಂದು ಬಯಸುತ್ತೇವೆ, ಆ ಪಾವಿತ್ರ್ಯ ಉಳಿದಿದೆಯೇ? ಇದರ ಬಗ್ಗೆ ದೊಡ್ಡ ಚರ್ಚೆ ಆಗಬೇಕಾಗುತ್ತದೆ ಎಂದು ಅಭಿಪ್ರಾಯಪಟ್ಟರು.

**ಹಲವು ನೆನಪುಗಳನ್ನು ಮೆಲುಕು ಹಾಕಿದ ಶಾಸಕರು**

ಕಾಂಗ್ರೆಸ್‌ನ ಎಚ್.ಕೆ.ಪಾಟೀಲ್ ಮಾತನಾಡಿ, ನಮ್ಮ ವ್ಯವಸ್ಥೆಯಲ್ಲಿ ಶಾಸಕಾಂಗ ಅಂತಿಮವೋ, ನ್ಯಾಯಾಂಗ ಅಂತಿಮವೋ ಎಂಬ ಬಗ್ಗೆ ಅನೇಕ ಬಾರಿ ಚರ್ಚೆ ನಡೆದಿದೆ. ಜನರೇ ನೇರವಾಗಿ ಆಯ್ಕೆ ಮಾಡಿ ರಚಿಸಿದ ಜನಪ್ರತಿನಿಧಿಗಳ ಸಭೆಯೇ (ಶಾಸಕಾಂಗ) ಅಂತಿಮವಾದದ್ದು. ಈ ಜನಪ್ರತಿನಿಧಿಗಳ ಸಭೆ ಸಮರ್ಪಕವಾಗಿ ಕಾರ್ಯನಿರ್ವಹಿಸುವ ಜವಾಬ್ದಾರಿಯೂ ಇದೆ ಎಂದರು. ತಾವು ಕಾನೂನು ಮಂತ್ರಿಯಾಗಿದ್ದಾಗಿನ ಒಂದು ಘಟನೆ ನೆನಪಿಸಿಕೊಂಡ ಅವರು, 'ಹೈಕೋರ್ಟ್, ಅಧೀನ ನ್ಯಾಯಾಲಯಗಳಲ್ಲಿ ಬಾಕಿ ಉಳಿದಿರುವ ಪ್ರಕರಣಗಳ ಅಂಕಿಅಂಶ ನನ್ನ ಕೈಸೇರಿತ್ತು, ಬಾಕಿ ಉಳಿದಿದೆ ಎಂದು ಕಾನೂನು ಸಚಿವನಾಗಿ ಹೇಳುವ ಅವಕಾಶ ಇರಲಿಲ್ಲ. ಒಂದು ವೇಳೆ ಹೇಳಿದರೆ ನ್ಯಾಯಾಂಗ ಉಲ್ಲಂಘನೆಯಾದೀತೆಂದು ಹಿರಿಯ ವಕೀಲ ಸ್ನೇಹಿತರೇ ಹೇಳಿದ್ದರು. ಜನರ ನೋವು ಬಹಿರಂಗವಾಗಿ ಹೇಳದೆ ಹೋದರೆ ಹೇಗೆ ಎಂದು ಭಾವಿಸಿದ್ದೆ, ಆದರೂ ಸಲಹೆಯಂತೆ ಹೆಜ್ಜೆ ಹಿಂದಿಟ್ಟೆ. ಅದೇ ವಿಷಯವನ್ನು ಬೇರೆ ರೀತಿಯಲ್ಲಿ ಹೇಳಿ ಎಂದು ವಕೀಲರು ಸಲಹೆ ನೀಡಿದ್ದರು, ಆ ಪ್ರಕಾರ ಬಾಕಿ ಉಳಿದ ಪ್ರಕರಣಗಳ ಇತ್ಯರ್ಥಕ್ಕೆ ಅಗತ್ಯವಾದ ಮೂಲ ಸೌಕರ್ಯ ನೀಡಲು ಸರ್ಕಾರ ಸಿದ್ಧವಿದೆ ಎಂದು ಹೇಳಿದರೆ ನ್ಯಾಯಾಂಗದವರಿಗೂ ಎಚ್ಚರಿಕೆಯಾಗುತ್ತದೆ ಎಂದು ಹೇಳಬೇಕಾಯಿತು' ಎಂದರು.

●ಪುಟ 7





ನ್ಯಾಯಾಂಗವನ್ನು ಒಂದು ರೀತಿಯಲ್ಲಿ ಇಟ್ಟುಬಿಟ್ಟಿದ್ದೇವೆ. ಅವರ ಬೇಡಿಕೆ ಏನೇ ಬಂದರೂ ತಡ ಮಾಡದೆ ಸರ್ಕಾರದಿಂದ ಮಾಡಿಕೊಟ್ಟು ಗೌರವಕೊಡುತ್ತೇವೆ, ಅವರ ಕಡೆಯಿಂದಲೂ ಇದೇ ಭಾವನೆ ಬರಬೇಕಲ್ಲವೇ?

| ಜಗದೀಶ ಶೆಟ್ಟರ್ ಸಚಿವ



ಶಾಸಕಾಂಗ ವಿಫಲವಾದಾಗ ನ್ಯಾಯಾಂಗ ಕ್ರಿಯಾಶೀಲ ವಾಗುತ್ತದೆ. ಅದೇ ಈಗಿನ ಪರಿಸ್ಥಿತಿಗೆ ಕಾರಣ. ಜನ ನ್ಯಾಯಕ್ಕಾಗಿ ಕಣ್ಣು ಬಿಟ್ಟು ಕಾಯುವ ಪರಿಸ್ಥಿತಿ ಇದೆ. ಆದರೆ ನ್ಯಾಯದೀಪ ಆರಿ ಹೋಗುತ್ತದೆ ಎಂಬ ಭೀತಿ ಎದುರಾಗಿದೆ.

| ರಮೇಶ್ ಕುಮಾರ್ ಕಾಂಗ್ರೆಸ್ ಶಾಸಕ



ನ್ಯಾಯಾಂಗ ಸೀತೆಯಷ್ಟೇ ಪಾವಿತ್ರ್ಯ ಕಾಪಾಡಿಕೊಳ್ಳಬೇಕೆಂದು ಬಯಸುತ್ತೇವೆ, ಆ ಪಾವಿತ್ರ್ಯ ಉಳಿದಿದೆಯೇ? ಇದರ ಬಗ್ಗೆ ದೊಡ್ಡ ಚರ್ಚೆ ಆಗಬೇಕಾಗುತ್ತದೆ.


| ಎ.ಟಿ.ರಾಮಸ್ವಾಮಿ ಜೆಡಿಎಸ್ ಶಾಸಕ

## ಕಾರ್ಯಕ್ರಮದಲ್ಲಿ ಪಕ್ಕದಲ್ಲಿ ಕೂರಿಸಿರಲಿಲ್ಲ!

ಹಿರಿಯ ಶಾಸಕ ಆರಗ ಜ್ಞಾನೇಂದ್ರ ಮಾತನಾಡಿ, 1996ರಲ್ಲಿ ತಮ್ಮಕ್ಷೇತ್ರ ತೀರ್ಥಹಳ್ಳಿಯಲ್ಲಿ ನಡೆದ ಒಂದು ಘಟನೆ ನೆನಪಿಸಿಕೊಂಡರು. ಕೋರ್ಟ್ ಉದ್ಘಾಟನೆ ಕಾರ್ಯಕ್ರಮದಲ್ಲಿ ಜನಪ್ರತಿನಿಧಿಯನ್ನು ಪಕ್ಕದಲ್ಲಿ ಕೂರಿಸಿಕೊಳ್ಳಲು ಒಪ್ಪದಿದ್ದಾಗ, ತೀರ್ಥಹಳ್ಳಿ ಬಂದ್ ಮಾಡಿಸಿದ್ದೆ. ಅಂದು ಕಾನೂನು ಸಚಿವರಾಗಿದ್ದ ಚಂದ್ರೇಗೌಡರು ಕರೆ ಮಾಡಿ ಚರ್ಚೆ ಮಾಡಿದ್ದರು. ನ್ಯಾಯಾಂಗದ ಸಂಬಳ, ಬೇಡಿಕೆಗಳನ್ನು ಬಜೆಟ್‌ನಲ್ಲಿ ಅಪ್ರೂವ್ ಮಾಡಿಕೊಡುವವರು ನಾವು (ಶಾಸಕರು). ನಮ್ಮನ್ನು ಕ್ರಿಮಿನಲ್‌ಗಳ ತರಹ ಏಕೆ ನೋಡುತ್ತಾರೆ, ಶಾಸಕಾಂಗವನ್ನು ಯಾವ ರೀತಿ ಅಳೆಯುತ್ತಿದ್ದಾರೆ ಎಂಬುದು ಇದರಿಂದ ಗೊತ್ತಾಗುತ್ತದೆ' ಎಂದು ಹೇಳಿದರು.

ಶಾಸಕಾಂಗ, ನ್ಯಾಯಾಂಗ, ಕಾರ್ಯಾಂಗ ಜನರ ಭಾವನೆಗಳಿಗೆ ತಕ್ಕಂತೆ ವರ್ತಿಸದಿದ್ದರೆ, ಎತ್ತರಕ್ಕೆ ಏರಲಿಲ್ಲ ಎಂದಾದರೆ ಜನಜೀವನದಲ್ಲಿ ಆಘಾತಕರ ಸ್ಥಿತಿ ನಿರ್ಮಾಣ ಆಗುತ್ತದೆ.

| ವಿಶ್ವೇಶ್ವರ ಹೆಗಡೆ ಕಾಗೇರಿ ವಿಧಾನಸಭೆ ಸ್ಪೀಕರ್



ಯಾರೂ ದೇವಲೋಕದಿಂದ ಧರೆಗಿಳಿದು ಬಂದಿಲ್ಲ, 9 ತಿಂಗಳು ತಾಯಿಯ ಗರ್ಭದಲ್ಲಿ ಬೆಳೆದು ಬಂದವರೇ. ಕೆಲವರಿಗೆ ಆ ಗೌರವದ ವೃತ್ತಿ ಮಾನ್ಯತೆ ಸಿಕ್ಕಿರುತ್ತದೆ. ಆ ಅವಕಾಶವನ್ನು ದೇಶಕ್ಕಾಗಿ ಸಮರ್ಪಿಸಬೇಕು.

| ಶಿವಲಿಂಗೇಗೌಡ ಜೆಡಿಎಸ್ ಶಾಸಕ



ನ್ಯಾಯಾಂಗದ ಸಂಬಳ, ಬೇಡಿಕೆಗಳನ್ನು ಬಜೆಟ್‌ನಲ್ಲಿ ಅಪ್ರೂವ್ ಮಾಡಿಕೊಡುವವರು ನಾವು (ಶಾಸಕರು). ನಮ್ಮನ್ನು ಕ್ರಿಮಿನಲ್‌ಗಳ ತರ ಏಕೆ ನೋಡುತ್ತಾರೆ? ಶಾಸಕಾಂಗವನ್ನು ಯಾವ ರೀತಿ ಅಳೆಯುತ್ತಿದ್ದಾರೆ ಎಂಬುದು ಇದರಿಂದ ಗೊತ್ತಾಗುತ್ತದೆ.

| ಆರಗ ಜ್ಞಾನೇಂದ್ರ ಬಿಜೆಪಿ ಶಾಸಕ

(4)

# ನ್ಯಾಯಾಂಗ V/S ಶಾಸಕಾಂಗ

ಮೊದಲನೇ ಪುಟದಿಂದ...

ಅವರು ಹೆಚ್ಚೋ, ನಾವು ಹೆಚ್ಚೋ ಎನ್ನುವ ಸಂದರ್ಭದಲ್ಲಿ ಸುಪ್ರಿಂ ಕೋರ್ಟ್ ನ್ಯಾಯಾಧೀಶರು ಸುದ್ದಿಗೋಷ್ಠಿ ಮಾಡಿದ್ದಿದೆ. ಈ ಸಂದರ್ಭದಲ್ಲಿ ಎಲ್ಲರೂ ಆತ್ಮಾವಲೋಕನ ಮಾಡಿಕೊಳ್ಳುವ ಅಗತ್ಯವಿದೆ ಎಂದರು. ಸಚಿವ ಜಗದೀಶ ಶೆಟ್ಟರ್ ಕೂಡ ದನಿಗೂಡಿಸಿ, 'ನ್ಯಾಯಾಂಗದ ಬಗ್ಗೆ ಭಕ್ತಿ ಗೌರವವಿದೆ. ನಿವೃತ್ತ ಸಿಜೆಐ ಒಬ್ಬರು ನ್ಯಾಯಾಂಗದಲ್ಲಿ ಶೇ.50 ಭ್ರಷ್ಟಾಚಾರ ಇದೆ ಎಂದು ಹೇಳಿದ್ದಿದೆ. ರೈಡ್‌ಗಳು ಆಗಿದ್ದಿದೆ' ಎಂದರು. 'ನ್ಯಾಯಾಂಗವನ್ನು ಒಂದು ರೀತಿಯಲ್ಲಿ ಇಟ್ಟುಬಿಟ್ಟಿದ್ದೇವೆ. ಅವರ ಬೇಡಿಕೆ ಏನೇ ಬಂದರೂ ತಡ ಮಾಡದೆ ಸರ್ಕಾರದಿಂದ ಮಾಡಿಕೊಟ್ಟು ಗೌರವಿಸುತ್ತೇವೆ, ಅವರ ಕಡೆಯಿಂದ ಇದೇ ಭಾವನೆ ಬರಬೇಕಲ್ಲವೇ' ಎಂದು ಪರೋಕ್ಷವಾಗಿ ಕುಟುಕಿದರು.

**» ಯಾರೂ ದೇವಲೋಕದಿಂದ ಬಂದಿಲ್ಲ ಎಂದ ಶಿವಲಿಂಗೇಗೌಡ**

ವಿಧಾನಮಂಡಲದಲ್ಲಿ ಮಾತ್ರ ಮಾತನಾಡುವ ಹಕ್ಕು ಇದೆ, ಇಲ್ಲಿ ಚರ್ಚೆ ಆಗಬೇಕಲ್ಲ? ಕಾರ್ಯಾಂಗ, ಶಾಸಕಾಂಗ ಕೆಟ್ಟರೆ ಒಂದು ರೀತಿ, ನ್ಯಾಯಾಂಗ ಕೆಟ್ಟರೆ, ಅಲ್ಲಿನ ತೀರ್ಪುಗಳು ಬೇರೆ ರೀತಿ ಹೊರಗೆ ಬಂದರೆ ಅವ್ಯವಸ್ಥೆ ಆಗುತ್ತದೆ ಎಂದು ಗಂಭೀರ ದನಿಯಲ್ಲಿ ಹೇಳಿದರು. ಶಾಸಕಾಂಗ, ನ್ಯಾಯಾಂಗ, ಕಾರ್ಯಾಂಗ ಜನರ ಭಾವನೆಗಳಿಗೆ ತಕ್ಕಂತೆ ವರ್ತಿಸದಿದ್ದರೆ, ಎತ್ತರಕ್ಕೆ ಏರಲಿಲ್ಲ ಎಂದಾದರೆ ಜನಜೀವನದಲ್ಲಿ ಆಘಾತಕರ ಸ್ಥಿತಿ ನಿರ್ಮಾಣ ಆಗುತ್ತದೆ ಎಂದು ಸ್ಪೀಕರ್ ಹೇಳಿದರು. ಶಾಸಕ ಶಿವಲಿಂಗೇಗೌಡ ಮಾತನಾಡಿ, 'ಯಾರೂ ದೇವಲೋಕದಿಂದ ಬಂದಿಲ್ಲ. ಕೆಲವರಿಗೆ ಆ ಗೌರವದ ವೃತ್ತಿ ಮಾನ್ಯತೆ ಸಿಕ್ಕಿರುತ್ತದೆ. ಆ ಅವಕಾಶವನ್ನು ದೇಶಕ್ಕಾಗಿ ಸಮರ್ಪಿಸಬೇಕು. ಆದರೆ ಇಂದು ವೈಯಕ್ತಿಕ ತೀರ್ಪು ಬರುತ್ತಿದೆ' ಎಂದು ಮಾತಲ್ಲೇ ಚುಚ್ಚಿದರು.

'ಅಲ್ಲಿನ ವಿಚಾರ ಬಿತ್ತರಿಸುವ ಶಕ್ತಿ ನಮಗಿಲ್ಲ. ಸದನದಲ್ಲಿ ಮಾತ್ರ ಧೈರ್ಯದಿಂದ ಮಾತನಾಡಬಹುದು. ಹೊರಗೆ ಮಾತನಾಡಿದರೆ ನಮ್ಮನ್ನು ಎಲ್ಲೋ ನಿಲ್ಲಿಸುತ್ತಾರೆ. ಕಾನೂನು ರಚಿಸುವವರು ನಾವು. ನಾವೂ ಮಿತಿಹಾಕಿ ಕಾರ್ಯಾಚರಣೆ ಮಾಡುವಂತಾಗಬೇಕು' ಎಂದು ಅಭಿಪ್ರಾಯಪಟ್ಟರು. ಅಂತಿಮವಾಗಿ, ಕಾನೂನು ಸಚಿವರೊಂದಿಗೆ ಚರ್ಚೆ ಮಾಡಿ, ಯಾವ ರೀತಿ ಹೆಚ್ಚು ಚರ್ಚೆಗೆ ಅವಕಾಶ ಮಾಡಿಕೊಡಬಹುದೆಂಬ ಬಗ್ಗೆ ತೀರ್ಮಾನಿಸಲಾಗುತ್ತದೆ ಎಂದು ಸ್ಪೀಕರ್ ಶಾಸಕರಿಗೆ ಭರವಸೆ ನೀಡಿದರು.